ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

<u>ಸಿ.ಸಿ. ನಂ.: 820/2022</u>

....................................................................

CW 01
PW 03

ಹೆಸರು : ಉಮಾ ಭೀ ಬಸರಕೋಡ
ತಂದೆಯ ಹೆಸರು : ಭೀಮಪ್ಪ
ವಯಸ್ಸು : 33 ವರ್ಷ
ಉದ್ಯೋಗ : ಪಿ ಎಸ್ ಐ, ಸಿ ಎಸ್ ಪಿ ಕಾರವಾರ
ವಾಸಸ್ಥಳ : ಕಾರವಾರ.

ದಿನಾಂಕ 16-06-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ</u>** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನಾನು ಏಪ್ರಿಲ್ 2022 ರಿಂದ ಜನವರಿ 2023 ರ ವರೆಗೆ ನಾನು ಹಳಿಯಾಳ ಪೊಲೀಸ ಠಾಣೆಯ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 09-05-2022 ರಂದು ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಚಾಸಾ 7 ರವರು ಠಾಣೆಗೆ ಬಂದು ಕಳಾಸಾಪುರ ಗ್ರಾಮದಲ್ಲಿ ಜೀವಪ್ಪ ಜಾವಳೇಕರ ಎಂಬ ವ್ಯಕ್ತಿ ಸರಾಯಿ ಕುಡಿಯಲು ಅನುಕೂಲ ಮಾಡಿಕೊಟ್ಟಿದ್ದಾನೆ ಮತ್ತು ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಕೊಟ್ಟ ಮೇರೆಗೆ ನಾನು ನಮ್ಮ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿ ದಾಳಿ ಮಾಡಲು ಮೌಖಿಕ ಅನುಮತಿ ಪಡೆದಿರುತ್ತೇನೆ. ಚಾಸಾ 7 ರವರಿಗೆ ಪಂಚರನ್ನು ಕರೆತರಲು ತಿಳಿಸಿದಂತೆ, ಅವರು ಚಾಸಾ 2 ಮತ್ತು 3 ರವರನ್ನು ಹಾಜರುಪಡಿಸಿದರು. ಚಾಸಾ 4 ರಿಂದ 7 ರವರು ಠಾಣೆಯಲ್ಲಿ ಸೇರಿ ಪಂಚರನ್ನು ಕರೆದುಕೊಂಡು ಮಧ್ಯಾಹ್ನ 04-00 ಗಂಟೆಗೆ ಘಟನಾ ಜಾಗಕ್ಕೆ ಹೊರಟೆವು, 04-25 ಘಟನಾ ಜಾಗವನ್ನು ತಲುಪಿ, 04-30 ಕ್ಕೆ ಪಂಚರ ಸಮಕ್ಷಮದಲ್ಲಿ ದಾಳಿ ಮಾಡಿದೆವು ಮತ್ತು ನಾನು ಆರೋಪಿಯನ್ನು ಹಿಡಿದುಕೊಂಡೆ, ಅಲ್ಲಿದ್ದ ಇಬ್ಬರು ಕುಡಿಯುತ್ತಿರುವ ವ್ಯಕ್ತಿಗಳು ನಮ್ಮನ್ನು ಸಮವಸ್ತ್ರದಲ್ಲಿ ನೋಡಿ ಓಡಿ ಹೋದರು. ಆರೋಪಿಯನ್ನು ನಾವು ವಿಚಾರಣೆ ಮಾಡಿದಾಗ ಆತನು ಮಾರಾಟ ಮಾಡಲು ಯಾವುದೇ ಪರವಾನಿಗೆ ಪಡೆದಿಲ್ಲ ಎಂದು ಹೇಳಿದ. ಪಂಚರ ಸಮಕ್ಷಮ ಘಟನಾ ಜಾಗವನ್ನು ಪರಿಶೀಲನೆ ಮಾಡಿ, 90 ಎಮ್ ಎಲ್

ಒರಿಜಿನಲ್ ಚಾಯ್ಸ್ ಪ್ಯಾಕೇಟ್ ಗಳು ಒಂದು ರಟ್ಟಿನ ಡಬ್ಬಿಯಲ್ಲಿ ಸಿಕ್ಕವು. ಒಂದು ಪ್ಲಾಸ್ಟಿಕ್ ಬಾಟಲ್, ಎರಡು ಖಾಲಿ ಲೋಟಗಳು, ನಾಲ್ಕು ಖಾಲಿ ಒರಿಜಿನಲ್ ಚಾಯ್ಸು ಪ್ಯಾಕೇಟ್ ಗಳು ಮತ್ತು 90 ಎಮ್ ಎಲ್ ಮ್ಯಾಕ್ ಕ್ವೀನ್ ಟೀಷ್ ಕಂಪನಿಯ ಸರಾಯಿ 5 ಪ್ಯಾಕೇಟ್ ಸಿಕ್ಕವು. ಅವುಗಳನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡು, ಬಿಳಿ ಬಟ್ಟೆಯಲ್ಲಿ ಸೀಲ್ ಮಾಡಿ, ಪಿ ಎಸ್ ಐ ರವರ ಅರಗಿನ ಸೀಲ್ ಹಾಕಿದೆವು. ಆ ಸಮಯದಲ್ಲಿ ಘಟನಾ ಜಾಗದ ಪಂಚನಾಮೆಯನ್ನು ಮಧ್ಯಾಹ್ನ 04-30 ರಿಂದ 05-30 ರ ವರೆಗೆ ಮಾಡಿದೆವು. ನಂತರ ಠಾಣೆಗೆ ಬಂದು ಠಾಣಾ ಪ್ರಭಾರದಲ್ಲಿದ್ದ ಚಾಸಾ 11 ರವರಿಗೆ ಗಣಕೀಕೃತ ದೂರನ್ನು ನೀಡಿದೆನು, ಆರೋಪಿ ಮತ್ತು ಮು.ಮಾ. ಮತ್ತು ಪಂಚನಾಮೆಯನ್ನು ಹಾಜರುಪಡಿಸಿದೆವು.

ಸದರಿ ಪಂಚನಾಮೆಯನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1 ಸಿ ಎಂದು ಗುರುತಿಸಲಾಯಿತು.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತನು ಈಗ ನ್ಯಾಯಾಲಯದಲ್ಲಿ ಇರುವುದಿಲ್ಲ. ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆಗೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಜಪ್ತುಪಡಿಸಿಕೊಂಡ ಒರಿಜಿನಲ್ ಚಾಯ್ಸ್ ವಿಸ್ಕಿ ಪ್ಯಾಕೇಟ್ ಗಳನ್ನು ಮು.ಮಾ. 1 ಎಂದು, 90 ಎಮ್ ಎಲ್ ಮ್ಯಾಕ್ ಕ್ವೀನ್ ಟೀಷ್ ಕಂಪನಿಯ ಸರಾಯಿ 5 ಪ್ಯಾಕೇಟ್ ಗಳನ್ನು ಒಟ್ಟಾರೆಯಾಗಿ ಮು.ಮಾ. 2 ಎಂದು, ಎರಡು ಪ್ಲಾಸ್ಟಿಕ್ ಲೋಟಗಳನ್ನು ಮು.ಮಾ. 3 ಎಂದು, ಒಂದು ಪ್ಲಾಸ್ಟಿಕ್ ಬಾಟಲಿಯನ್ನು ಮು.ಮಾ. 4 ಎಂದು, ನಾಲ್ಕು ಖಾಲಿ ಒರಿಜಿನಲ್ ಚಾಯ್ಸು ಪ್ಯಾಕೇಟ್ ಗಳನ್ನು ಮು.ಮಾ. 5 ಎಂದು, ಒಂದು ರಟ್ಟಿನ ಡಬ್ಬಿಯನ್ನು ಮು. ಮಾ. 6 ಎಂದು ಗ ಗುರುತಿಸಲಾಯಿತು.

ನಾನು ನೀಡಿದ ದೂರನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರನ್ನು ಗುರುತಿಸಿದ ಮೇರೆಗೆ ಅದನ್ನು ನಿಪಿ 2, ಸಾಕ್ಷಿಯ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು.

ದಿನಾಂಕ 11-05-2022 ರಂದು ನಾನು ಚಾಸಾ 12 ರವರ ಮುಂದೆ ಮರುಹೇಳಿಕೆ ನೀಡಿ ಮೂಲ ದೂರಿನಲ್ಲಿ ಆರೋಪಿ ಕುಡಿಯಲು ಅನುಕೂಲ ಮಾಡಿಕೊಟ್ಟಿದ್ದಾನೆ ಎಂದು ಮಾತ್ರ ಸೇರಿಸಲಾಗಿತ್ತು, ಮಾರಾಟ ಮಾಡುತ್ತಿದ್ದ ಎಂದು ನಮೂದಿಸಿರಲಿಲ್ಲ ಹಾಗಾಗಿ ಆ ಕುರಿತು ಆ ಪದವನ್ನು ಅಳವಡಿಸಿಕೊಳ್ಳಲು ತಿಳಿಸಿರುತ್ತೇನೆ.

**ಪಾಟೀ ಸವಾಲು :** ಆರೋಪಿ ಪರ ಶ್ರೀ ಎಸ್ ಕೆ ಕೆ ವಕೀಲರಿಂದ.

ಪಂಚರಿಗೆ ಪ್ರಕರಣದಲ್ಲಿ ಪಂಚರಾಗಲು ನೋಟೀಸ ಕೊಟ್ಟಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೀರಿ ಘಟನಾ ಜಾಗದಲ್ಲಿ ಬರೆದಿದ್ದೇವೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ 7 ರವರಿಗೆ ಭಾತ್ಮಿ ಬಂದಾಗ ನಾನು ಠಾಣೆಯಲ್ಲಿ ಇದ್ದೆ. ಠಾಣೆಯಿಂದ ಘಟನಾ ಜಾಗಕ್ಕೆ 10 ಕಿ.ಮೀ ದೂರ ಇದೆ ಎನ್ನುತ್ತಾರೆ. ಠಾಣೆಯಿಂದ ಘಟನಾ ಜಾಗಕ್ಕೆ ಪಂಚರೊಂದಿಗೆ ಮತ್ತು ಸಿಬ್ಬಂದಿಯೊಂದಿಗೆ ಹೋಗಲು ಸುಮಾರು 20-25 ನಿಮಿಷ ಬೇಕಾಯಿತು. ಚಾಸಾ 2 ರವರ ಮಂಗಳವಾಡ ದವರು ಮತ್ತು ಚಾಸಾ 3 ರವರು ಹಳಿಯಾಳದವರು ಎಂದರೆ ಸರಿ. ಕಳಸಾಪುರ ಗ್ರಾಮಕ್ಕೆ ಹಳಿಯಾಳದಿಂದ ಹೋಗಬೇಕಾದರೆ ಮೊದಲು ಮಂಗಳವಾಡ ಗ್ರಾಮಕ್ಕೆ ಹೋಗಿ ಅಲ್ಲಿಂದ ಕಳಸಾಪುರಕ್ಕೆ ಹೋಗಬೇಕಾಗುತ್ತದೆ ಎಂದರೆ ಸರಿ. ಜಪ್ತುಪಡಿಸಿಕೊಂಡ ಮು.ಮಾ. 3 ಮತ್ತು 4 ರ ರೀತಿಯ ವಸ್ತುಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ ಎಂದರೆ ಸರಿ. ಜಪ್ತುಪಡಿಸಿಕೊಂಡ ಸರಾಯಿ ಪ್ಯಾಕೇಟ್ ಗಳ ರೀತಿಯ ಪ್ಯಾಕೇಟ್ ಮಾರುಕಟ್ಟೆಯಲ್ಲಿ ಸಾರಾಯಿ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಆರೋಪಿ ಕಡೆಯಿಂದ ಯಾವುದೇ ವಸ್ತುಗಳು ಜಪ್ತುಪಡಿಸಿಕೊಂಡಿಲ್ಲ ಮು.ಮಾ. 1 ರಿಂದ 6 ಗಳನ್ನು ಮಾರುಕಟ್ಟೆಯಲ್ಲಿ ತಂದು ಪ್ರಕರಣದಲ್ಲಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ಚಾಸಾ 4 ರಿಂದ 7 ರವರು ನಮ್ಮ ಇಲಾಖೆಯ ಸಿಬ್ಬಂದಿಗಳು ಎಂದರೆ ಸರಿ. ಆರೋಪಿ ಯಾವುದೇ ತಪ್ಪ ಮಾಡದಿದ್ದರೂ ಠಾಣೆಯ ಅಂಕಿ ಸಂಖ್ಯೆಗೋಸ್ಕರ ಸುಳ್ಳು ದೂರು ನೀಡಿ, ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ಅಬಕಾರಿಗೆ ಸಂಬಂಧಿಸಿ ದಾಳಿ ಮಾಡಲು ಸರ್ಕಾರದ ಪ್ರತ್ಯೇಕ ಇಲಾಖೆ ಇದೆ ಎಂದರೆ ಸರಿ. ಆರೋಪಿ ಯಾವುದೇ ಮಧ್ಯ ಮಾರಾಟ ಮಾಡಿಲ್ಲ, ಕುಡಿಯಲು ಅನುಕೂಲ ಮಾಡಿಕೊಟ್ಟಿಲ್ಲ ಸುಳ್ಳು ದೂರು ನೀಡಿ ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.